# ಇಂಥವರೂ ಇದ್ದಾರೆ

ನಿಜವಾದ ಶಿಕ್ಷಣವು ವ್ಯಕ್ತಿಯನ್ನು ನಿಸ್ವಾರ್ಥಿಯಾಗಿಸಬೇಕು, ಉತ್ತಮ ಮಾನವನನ್ನಾಗಿಸಬೇಕು. ಅಂತಹದೊಂದು ಘಟನೆ ಇಲ್ಲಿದೆ. ಬೆಂಗಳೂರಿನ ನಿವಾಸಿಗಳಾದ ಲೇಖಕಿ ಉತ್ತಮ ಗ್ರಂಥಗಳನ್ನು ಓದುವ ಹವ್ಯಾಸವುಳ್ಳವರು. ಬಂಗಾಳಿಯಲ್ಲಿರುವ ಪೂಜ್ಯ ಸ್ವಾಮಿ ಲೋಕೇಶ್ವರಾನಂದಜಿಯವರ ಸ್ಮೃತಿಸಂಕಲನದಿಂದ ಆಯ್ದು ಈ ಲೇಖನವನ್ನು ಆಕರ್ಷಕವಾಗಿ ನಿರೂಪಿಸಿದ್ದಾರೆ.

ಕುಮಾರಿ ಮೀನಾ

ಇಡೀ ಭಾರತದ ಪುನರುದ್ಧಾರ ರಾಷ್ಟ್ರದ ಯುವಶಕ್ತಿಯನ್ನು ಅವಲಂಬಿಸಿದೆ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ದೈಹಿಕವಾಗಿ ಬಲಿಷ್ಠರೂ, ಉತ್ತಮ ಶೀಲಸಂಪನ್ನರೂ ಆದ ಕೆಲವೇ ಯುವಕರು ನನ್ನ ಬಳಿ ಇದ್ದರೆ ಇಡೀ ಪ್ರಪಂಚವನ್ನೇ ಅಲುಗಾಡಿಸಬಲ್ಲೆ ಎಂತಲೂ ಹೇಳಿದ್ದಾರೆ. ಕೇವಲ ವಿದ್ಯಾವಂತರಾಗಿ ಹಣ ಸಂಪಾದಿಸುವುದು, ಪಾಶ್ಚಾತ್ಯ ದೇಶಗಳಿಗೆ ಹೋಗಿ ಅಲ್ಲಿನ ಸುಖದಲ್ಲಿ ಮೈಮರೆಯುವುದೇ ಜೀವನದ ಉದ್ದೇಶವಲ್ಲ. 'ಜನನಿ ಹಾಗೂ ಜನ್ಮಭೂಮಿ'ಗಾಗಿ ಏನೂಮಾಡದೆ ಕೇವಲ ತಮ್ಮ ಸ್ವಾರ್ಥವನ್ನೇ ಚಿಂತಿಸುವ ಬಹುಜನ ಯುವಕರ ಮುಂದೆ ಈಗ ನಿರೂಪಿಸುವ ಸತ್ಯ ಘಟನೆ ಸ್ಫೂರ್ತಿದಾಯಕವೂ ಮಾರ್ಗದರ್ಶಕವೂ ಆಗಬಹುದು.




ಲೇಖಕರಾದ ಡಾಕ್ಟರ್ ವೈದ್ಯನಾಥ ಬಸು ಬರೆಯುತ್ತಾರೆ: ಪೂಜ್ಯ ಸ್ವಾಮಿ ಲೋಕೇಶ್ವರಾನಂದಜಿ ಮಹಾರಾಜರ ನೇತೃತ್ವದಲ್ಲಿ ನಡೆಯುತ್ತಿದ್ದ ಪಾಥುರಿಯಾ ಘಾಟ್ ಆಶ್ರಮಕ್ಕೆ ಸೇರಿದ ವಿದ್ಯಾರ್ಥಿನಿಲಯಕ್ಕೆ ಅನೇಕ ಬಾಲಕರು ಬರುತ್ತಿದ್ದರು. ಅವರಲ್ಲಿ ಬಹುತೇಕ ಮಕ್ಕಳು ಅತ್ಯಂತ ಬಡವರ ಅಥವಾ ಮಧ್ಯಮ ವರ್ಗದವರ ಮನೆಗಳಿಂದ ಬರುತ್ತಿದ್ದರು. ಮೇಲ್ನೋಟಕ್ಕೆ ಅತ್ಯಂತ ಸಾಧಾರಣರೂ, ಯಾವ ವಿಶೇಷವೂ ಇಲ್ಲದವರಂತೆ ಕಾಣುತ್ತಿದ್ದರು. ಆಶ್ರಮ ಜೀವನಕ್ಕೆ ಬಂದಮೇಲೆ ಕ್ರಮೇಣ ಅವರಲ್ಲಿ ಸುಪ್ತವಾಗಿರುತ್ತಿದ್ದ ವೈಶಿಷ್ಟ್ಯ, ಅಪರೂಪದ ಪ್ರತಿಭೆಗಳು ಪ್ರಕಾಶಗೊಳ್ಳುತ್ತಿದ್ದವು. ಇದೇ ಮಾತು ನರೇಂದ್ರಪುರದ ಆಶ್ರಮದ ಮಕ್ಕಳಿಗೂ ಅನ್ವಯಿಸುತ್ತದೆ. ಮುಂದೆ ಈ ಎರಡೂ ಕಡೆಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಆದರ್ಶ ಸಂನ್ಯಾಸಿಗಳಾಗಿಯೂ, ದಕ್ಷನಾಯಕರಾಗಿಯೂ, ಶ್ರೇಷ್ಠ ವೈದ್ಯರಾಗಿಯೂ, ಇಂಜಿನಿಯರ್‌ಗಳಾಗಿಯೂ, ವಿಜ್ಞಾನಿಗಳಾಗಿಯೂ, ಸಾಹಿತಿಗಳಾಗಿಯೂ, ಅಧ್ಯಾಪಕರಾಗಿಯೂ, ಸಮಾಜಸೇವಕರಾಗಿಯೂ, ಇನ್ನೂ ಅನೇಕ ವಿಧಗಳಲ್ಲಿ ಹೂಗಳಂತೆ ಅರಳಿ ಸುಗಂಧ ಬೀರಿದ್ದಾರೆ. ಇವರ ಹಿಂದಿದ್ದ ಸ್ಫೂರ್ತಿ ಯಾವುದು? ಅದು ಪೂಜ್ಯ ಸ್ವಾಮಿ ಲೋಕೇಶ್ವರಾನಂದಜಿಯವರ ದಿವ್ಯ ಸಾನ್ನಿಧ್ಯ, ಅವರ ಪ್ರೇರಣೆ, ಅವರ ನಿಸ್ವಾರ್ಥಪ್ರೇಮ ಹಾಗೂ ಆಶೀರ್ವಾದವಲ್ಲದೆ ಮತ್ತೇನೂ ಅಲ್ಲ. ಪಾಥುರಿಯಾ ಘಾಟ್, ನರೇಂದ್ರಪುರದ ಹುಡುಗರು ತಿಳಿದೂ ತಿಳಿಯದೆಯೊ ನಿತ್ಯವೂ ಲೋಕೇಶ್ವರಾನಂದಜಿಯವರ ವ್ಯಕ್ತಿತ್ವದ ಬಗ್ಗೆ ಆಲೋಚಿಸುತ್ತಿದ್ದರು. ಅದು ಅವರಲ್ಲಿ ಒಂದು ಉದಾತ್ತ ಭಾವನೆಯನ್ನು ಉಂಟುಮಾಡುತ್ತಿತ್ತು. ಪೂಜ್ಯ ಸ್ವಾಮಿಜಿಯವರು ಕೂಡ ಪ್ರತಿಯೊಬ್ಬ ಹುಡುಗನ ಹಿತಚಿಂತನೆಯನ್ನು ಬಹಳವಾಗಿ ಮಾಡುತ್ತಿದ್ದರು.

ದೂರದ ಒಂದು ಕುಗ್ರಾಮದ ತನ್ನ ಸ್ನೇಹಿತನಿಂದ ಪಾಥುರಿಯಾ ಘಾಟ್ ಆಶ್ರಮ ಹಾಗೂ ಪೂಜ್ಯ ಲೋಕೇಶ್ವರಾನಂದಜಿ ವಿಚಾರ ತಿಳಿದ ಓರ್ವ ದರಿದ್ರ ಬಾಲಕನಿಗೆ ಕೊಲ್ಕತಾಗೆ ಬಂದು ಆಶ್ರಮದ ಆಶ್ರಯದಲ್ಲಿದ್ದು ವಿದ್ಯಾಭ್ಯಾಸ ಮಾಡುವ ಆಸೆಯಿತ್ತು. ಆದರೆ ಆಗ ಶಾಲೆ ಸೇರುವ ಸಮಯ ಆಗಿಹೋಗಿತ್ತು. ಆತನ ಸ್ನೇಹಿತ ಹೇಳಿದ, "ನೀನು ಕೊಲ್ಕತಾಗೆ ಹೋಗಿ ಮಹಾರಾಜರನ್ನು ಹಿಡಿ. ಅವರು ನಿನ್ನನ್ನು ಶಾಲೆಗೆ ಖಂಡಿತ ಸೇರಿಸಿಕೊಳ್ಳುತ್ತಾರೆ, ಅವರು ಬಡ ಮಕ್ಕಳನ್ನು ಬಹುವಾಗಿ ಪ್ರೀತಿಸುತ್ತಾರೆ." ಹೌರಾ ನಿಲ್ದಾಣದಿಂದ ಆಶ್ರಮ ಬಹು ದೂರವೇನಿಲ್ಲ, ನಡೆದೇ ಹೋಗಬಹುದು ಎಂದೂ ಆತ ಹೇಳಿದ. ಆ ಬಾಲಕ ಹಾಗೆಯೇ ಮಾಡಿದ. ಆತನ ಕಥೆಯನ್ನು ಆಲಿಸಿದ ಪೂಜ್ಯ ಸ್ವಾಮಿಜಿ ಅವನನ್ನು ಆಶ್ರಮಕ್ಕೆ ಸೇರಿಸಿಕೊಂಡು ಕಾಲೇಜಿನಲ್ಲಿ ಓದಲು ಅವಕಾಶವನ್ನು ಕೊಡಿಸಿದರು. ಆ ಬಾಲಕ ಅತ್ಯಂತ ಸರಳ ಸ್ವಭಾವದವನು ಹಾಗೂ ತೀಕ್ಷ್ಣ ಬುದ್ಧಿಸಂಪನ್ನ ಎಂದು ಕೆಲವೇ ದಿನಗಳಲ್ಲಿ ತಿಳಿಯಿತು. ಆತನಲ್ಲಿ ಅನೇಕ ಗುಣಗಳಿದ್ದವು. ಒಳ್ಳೆಯ ತಬಲಾವಾದಕ. ಆಶ್ರಮದ ಆರಾತ್ರಿಕ ಸಮಯದಲ್ಲಿ ಚೆನ್ನಾಗಿ ತಬಲಾ ಜೊತೆಗೂಡುತ್ತಿತ್ತು. ಒಳ್ಳೆಯ ಫುಟ್‌ಬಾಲ್ ಆಟಗಾರ, ಆಶ್ರಮದ ಟೀಮಿನಲ್ಲಿ ಒಳ್ಳೆಯ ಸ್ಥಾನ ಪಡೆದ. ಈ ಎಲ್ಲಾ ಕಾರಣಗಳಿಂದಾಗಿ ಆತ ಲೋಕೇಶ್ವರಾನಂದಜಿಯವರ ವಿಶೇಷ ಪ್ರೀತಿಗೆ ಪಾತ್ರನಾದ. ಆಶ್ರಮಕ್ಕೆ ಬಂದ ಹಲವು ದಿನಗಳಲ್ಲಿ ಆ ಬಾಲಕ ತನ್ನನ್ನೇ ನಿಮಿತ್ತನನ್ನಾಗಿಸಿಕೊಂಡು ಹಾಸ್ಯಲಹರಿ ಹರಿಸುತ್ತಿದ್ದ. ತನ್ನ ಬಗ್ಗೆ ನಾನಾ ಕಥೆಗಳನ್ನು ಮಜಾ ಬರುವಂತೆ ಹೇಳಿ ಎಲ್ಲರನ್ನೂ ನಗಿಸುತ್ತಿದ್ದ. ಆ ಬಾಲಕನ ಚಲನ,

ವಲಸ ಸಾಧಾರಣ ಮಾತುಕಥೆಗಳೆಲ್ಲದರಲ್ಲೂ ನಗುವಿನ ಲೇಪನವಿರುತ್ತಿತ್ತು. ಆದರೆ ಅವೆಲ್ಲ ಶುದ್ಧವೂ ನಿರ್ದೋಷವೂ ಆಗಿರುತ್ತಿದ್ದವು.

ಆ ಬಾಲಕ ತನ್ನ ಗ್ರಾಮದಿಂದ ಕೊಲ್ಕತಾಗೆ ಬಂದಾಗ, ರೈಲು ನಿಲ್ದಾಣದಿಂದ ನಡೆದುಕೊಂಡೇ ಬಂದ. ಕೈಯಲ್ಲಿ ಒಂದು ಸಣ್ಣ ಪೆಟ್ಟಿಗೆ ಹಾಗೂ ಅವನ ಹಾಸಿಗೆ ಇದ್ದವು. ಹಾಗೆ ನಡೆದು ಬರುತ್ತಿದ್ದಾಗ ಹೌರಾ ಸೇತುವೆ ದಾಟಿ ಬರಬೇಕಾಗಿತ್ತು. ಆಗ ಇವನ ಕಣ್ಣಿಗೆ, ಒಬ್ಬ ವ್ಯಕ್ತಿಯು ಸೇತುವೆಯ ಮೇಲೆ ಕುಳಿತಿರುವುದು ಕಾಣಿಸಿತು. ಆ ವ್ಯಕ್ತಿಯ ಕಪಾಲದಲ್ಲಿ ತಿಲಕ, ಕತ್ತಿನಲ್ಲಿ ರುದ್ರಾಕ್ಷಿ ಮಾಲೆ, ಮೈಮೇಲೆ ಕೆಂಪು ಬಣ್ಣದ ವಸ್ತ್ರಗಳಿದ್ದವು. ಈ ಬಾಲಕ ಅವನಲ್ಲಿಗೆ ಹೋಗಿ ಭಾವಿಸಿದ, 'ಈತನೊಬ್ಬ ಜ್ಯೋತಿಷಿಯಿರಬೇಕು. ಮನುಷ್ಯರ ಭಾಗ್ಯವನ್ನು ಲೆಕ್ಕಮಾಡಿ ಹೇಳಲು ಆತ ಅಲ್ಲಿ ಕುಳಿತಿರುವನು'.

ಈ ನಮ್ಮ ಬಾಲಕ ಆತನ ಪಕ್ಕದಲ್ಲಿಯೆ ಕುಳಿತು ತನ್ನ ಕಥೆಯನ್ನೆಲ್ಲಾ ಹೇಳಿಕೊಂಡ. ಅನಂತರ ಕೇಳಿದ, 'ನಾನು ಸ್ವಾಮಿ ಲೋಕೇಶ್ವರಾನಂದರನ್ನು ಕಾಣುವೆನೇ ಇಲ್ಲವೇ? ಅವರನ್ನು ಕಂಡರೂ ಆಶ್ರಮದ ವಿದ್ಯಾರ್ಥಿನಿಲಯದಲ್ಲಿದ್ದು ಓದುವೆನೇ?' ಆ ಜ್ಯೋತಿಷಿ ಮೊದಲು ಏನೇನೊ ಪ್ರಶ್ನೆ ಕೇಳಿ ಕಡೆಗೆ ಕೈಯಲ್ಲಿ ಸ್ವಲ್ಪ ಹೂಗಳನ್ನು ತೆಗೆದುಕೊಂಡು ಏನೋ ಮಂತ್ರಗಳನ್ನು ಪಠಿಸಿದ. ನಂತರ ಕಣ್ಣು ತೆರೆದು ಆ ಬಾಲಕನ ಕೈಯಲ್ಲಿ ಹೂವುಗಳನ್ನು ಇಟ್ಟು ಕಣ್ಣುಮುಚ್ಚಿ ಕುಳಿತುಕೊಳ್ಳುವಂತೆ ಹೇಳಿ, ತಾನು ಹೇಳುವ ತನಕ ಕಣ್ಣು ತೆಗೆಯಬಾರದೆಂದೂ ನಿರ್ದೇಶಿಸಿದ. ಜ್ಯೋತಿಷಿ ಹೇಳಿದಂತೆ ಆ ಬಾಲಕ ಮಾಡಿದರೂ, ಒಂದು ಕೈಯಿಂದ ತನ್ನ ಪೆಟ್ಟಿಗೆ ಮತ್ತು ಹಾಸಿಗೆಯನ್ನು ಭದ್ರವಾಗಿ ಹಿಡಿದುಕೊಂಡೇ ಕುಳಿತ. ಆದರೂ ಅವನಿಗೆ ಸ್ವಲ್ಪ ಭಯ ವಾಯಿತು. ನಂತರ ಜ್ಯೋತಿಷಿ ಹೂಗಳನ್ನು ತೆಗೆದುಕೊಂಡು, ಆ ಬಾಲಕನ ಕಪಾಲ, ತಲೆ, ಎದೆಗೆ ಮುಟ್ಟಿಸಿ ಮಂತ್ರ ಹೇಳಲಾರಂಭಿಸಿದ. ಅನಂತರ ಕಣ್ಣು ತೆಗೆಯುವಂತೆ ಹೇಳಿದ, "ನೋಡು ಮಗು, ನಿನ್ನ ಮನಸ್ಸಿನ ಆಸೆ ಪೂರ್ಣವಾಗುವುದು. ನೀನು ಲೋಕೇಶ್ವರಾನಂದಜಿ ಅವರ ಆಶ್ರಮದಲ್ಲಿ ವಾಸ ಮಾಡುವೆ." ಆ ಬಾಲಕನ ಆನಂದ ಅವರ್ಣನೀಯ. ಅಂತೆಯೇ ನಡೆದು ಬಂದು ಸ್ವಾಮಿಜಿ ಅವರನ್ನು ಕಂಡು ಆಶ್ರಮದಲ್ಲಿ ಇರುವ ಅಪ್ಪಣೆ ಪಡೆದ. ಆದರೆ ಅಲ್ಲಿ ವಸತಿಗೆ ತಕ್ಷಣಕ್ಕೆ ಜಾಗ ಖಾಲಿಯಿಲ್ಲದ ಕಾರಣ ಹಲವು ದಿನಗಳ ಬಳಿಕ ಬರುವಂತೆ ಸ್ವಾಮಿಜಿ ಹೇಳಿದರು. ಆಗ ಆ ಬಾಲಕ ನೋಡಿಕೊಂಡ, ತನ್ನ ಜೇಬಿನಲ್ಲಿದ್ದ ಹಣವನ್ನೆಲ್ಲಾ ಆ ಜ್ಯೋತಿಷಿ ಕಣ್ಣುಮುಚ್ಚಿ ಕುಳಿತಿರು ಎಂದಾಗ ಲಪಟಾಯಿಸಿಬಿಟ್ಟಿದ್ದಾನೆ! ನಿಸ್ಸಹಾಯಕನಾದ ಆ ಬಾಲಕ ತನಗೆ ಪರಿಚಯವಿದ್ದ ಗ್ರಾಮದ ಒಬ್ಬ ಗಣ್ಯ ವ್ಯಕ್ತಿಯ ಮನೆಗೆ ಹೋಗಿ ತಂಗಬೇಕಾಯಿತು. ಆಶ್ರಮಕ್ಕೆ ಬಂದ ಮೇಲೆ ಆ ಜ್ಯೋತಿಷಿಯ ಹಾವಭಾವಗಳನ್ನೆಲ್ಲಾ ನಕಲಿ ಮಾಡಿ ಆತನ ಮಾತನ್ನೆಲ್ಲಾ ಹಾಗೆಯೇ ಆಡಿ ಅಲ್ಲಿದ್ದ ಎಲ್ಲಾ ಬಾಲಕರನ್ನೂ ಹಾಸ್ಯದ ಹೊನಲಲ್ಲಿ ತೇಲಿಸುತ್ತಿದ್ದ. ಅದನ್ನು ಕೇಳಿ ಆ ಮಕ್ಕಳೆಲ್ಲ ಹೊಟ್ಟೆ ಬಿರಿಯುವಂತೆ ನಗುತ್ತಿದ್ದರು.

ಈ ಬಾಲಕ ಆಶ್ರಮಕ್ಕೆ ಬಂದ ಸ್ವಲ್ಪ ಸಮಯದ ನಂತರ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಒಂದು ಪ್ರದರ್ಶನ ನಡೆಯಿತು. ಅದನ್ನು ನೋಡಲು ನಾನು (ಡಾ. ವೈದ್ಯನಾಥ ಬಸು) ಆತನನ್ನು ಜೊತೆಯಲ್ಲಿ ಕರೆದುಕೊಂಡು ಹೋದೆ. ಅಲ್ಲಿ ಮುಖ್ಯವಾಗಿ ಭಾರತ ಸ್ವಾತಂತ್ರ್ಯಸಂಗ್ರಾಮ ಕಾಲದ ಪ್ರಮುಖ ಘಟನೆಗಳ ಚಿತ್ರಗಳನ್ನು ಪ್ರದರ್ಶನ ಮಾಡಿದ್ದರು. ಬಹಳ ಜನ ಬಂದು ಅತ್ಯಂತ ಕುತೂಹಲದಿಂದ ಅದನ್ನು ವೀಕ್ಷಿಸುತ್ತಿದ್ದರು. ಈ ಬಾಲಕನೂ ಕೊಲ್ಕತಾಗೆ ಹೊಸದಾಗಿ ಬಂದಿದ್ದ. ಆತನಿಗೆ ಪ್ರದರ್ಶನವನ್ನು ತೋರಿಸುವ ಜವಾಬ್ದಾರಿಯನ್ನು ಪೂಜ್ಯ ಸ್ವಾಮಿಗಳು ನನಗೆ ಒಪ್ಪಿಸಿದ್ದರು. ಆ ಭಾವಚಿತ್ರಗಳನ್ನು ನೋಡುತ್ತ ನನಗೆ ತಿಳಿದಷ್ಟು ವಿಚಾರ ಅವನಿಗೆ ತಿಳಿಸುತ್ತಾ ಮುಂದುವರಿಯುತ್ತಿದ್ದಂತೆ ಹಠಾತ್ತನೆ ಆತ ನನ್ನ ಕೈ ಬಿಡಿಸಿಕೊಂಡು ಆ ಜನಜಂಗುಳಿಯ ಮಧ್ಯದಲ್ಲಿ ಎಲ್ಲೋ ಹೊರಟೇಹೋದ! ನನಗೆ ಒಂದರೆಕ್ಷಣ ಗಾಬರಿಯಾಯಿತು. ಹೋಗುವಾಗ "ವೈದ್ಯನಾಥ ಅಣ್ಣಾ! ಒಂದರೆಕ್ಷಣ ನಿಲ್ಲಿ, ನಾನು ಈಗಲೇ ವಾಪಸು ಬರುವೆ" ಎಂದ ಆತ ಒಂದು ಸಂದಿಗೆ ಹೋದ. ನಾನು ಆ ಜನಸಂದಣಿಯಲ್ಲಿ ಅಲ್ಲೇ ನಿಂತೆ. ಆತ ತಕ್ಷಣ ವಾಪಸು ಬಂದು ನನಗೆ ಹೇಳಿದ, "ನೋಡಿ, ಎಂಜಲು ಉಗುಳಿ ಬಂದೆ" ಎನ್ನುತ್ತ ಅಲ್ಲಿದ್ದ ಫಲಕ ತೋರಿಸಿದ: "ಇಲ್ಲಿ ಉಗುಳಿ" ಎಂದು ಅಲ್ಲಿ ಬರೆದಿತ್ತು. "ನೀನು ಈ ಜನಸಂದಣಿಯಲ್ಲಿ ಹಠಾತ್ತನೆ ಅಲ್ಲಿಗೆ ಏಕೆ ಹೋದೆ?" ಎಂದಾಗ ಅದಕ್ಕೆ ಆತ "ನಾನು ಆ ಫಲಕ ನೋಡಿದೆ. ಆದ್ದರಿಂದ ಅಲ್ಲಿ ಉಗುಳಿ ಬಂದೆ" ಎಂದ. ಅವನ ಮಾತಿನ ಪ್ರಕಾರ ಅಲ್ಲಿ ಉಗುಳಲೇ ಬೇಕೆಂದು ಅರ್ಥ! ಇನ್ನು ಮುಂದೆ ಅಂತಹ ಘಟನೆಗಳಾವುವೂ ನಡೆಯಲಿಲ್ಲ. ಆಶ್ರಮಕ್ಕೆ ವಾಪಸ್ಸಾಗಿ ಪೂಜ್ಯ ಸ್ವಾಮಿಜಿಯವರಿಗೆ ಎಲ್ಲಾ ತಿಳಿಸಿದಾಗ ಅವರು ಆಶ್ಚರ್ಯಪಡಲೇ ಇಲ್ಲ! ಅವರು ಹೊರಗಡೆ ತೋರಿಸಿಕೊಳ್ಳದಿದ್ದರೂ ಒಳಗೊಳಗೇ ಮುಸಿಮುಸಿ ನಗುತ್ತಿದ್ದರು! ಆದರೆ ನಮಗೆಲ್ಲಾ ಆ ಹುಡುಗನ ಮುಗ್ಧತೆ ಆಶ್ಚರ್ಯ ಉಂಟುಮಾಡಿತ್ತು!

ಇನ್ನೊಮ್ಮೆ ಈ ಹುಡುಗ ರಾತ್ರಿ ಊಟವಾದ ಬಳಿಕ ನನ್ನ ಮುಂದೆಯೇ ಸುಮಾರು ೧೪ ಮೊಟ್ಟೆಗಳನ್ನು ತಿಂದ. ನಾನು ರಾತ್ರಿ ಇವನಿಗೇನಾಗುವುದೊ ಎಂಬ ಚಿಂತೆಯಿಂದ ನಿದ್ರೆ ಮಾಡಲೇ ಇಲ್ಲ! ಮರುದಿನ ಬೆಳಗ್ಗೆ ಆತನ ಅವಸ್ಥೆ ಏನಾಗಿದೆಯೊ ನೋಡೋಣವೆಂದು ಅತ್ಯಂತ ಆತಂಕದಿಂದಲೇ ಆತನ ಕೋಣೆಯ ಕಡೆಗೆ ಹೊರಟೆ. ಆತನ ಕೋಣೆಯ ಬಾಗಿಲನ್ನು ಸ್ವಲ್ಪ ಸರಿಸಿ ತಲೆಯನ್ನು ಒಳಗೆ ಹಾಕಿ ನೋಡಿದೆ. ಆಶ್ಚರ್ಯ! ಆತ ಆಗಲೇ ಎದ್ದು ತನ್ನ ಮೇಜಿನ ಮೇಲೆ ಪುಸ್ತಕಗಳನ್ನು ಹರವಿಕೊಂಡು ಓದುತ್ತಿದ್ದಾನೆ! ನಾನು ಸಂದೇಹದಿಂದ ಬಗ್ಗಿ ನೋಡಿದ್ದನ್ನು ಗಮನಿಸಿ ಆ ಬಾಲಕ ನಗುತ್ತಾ, ನನಗೆ ಹೇಳಿದ, "ನೀವು ಏತಕ್ಕಾಗಿ ಬಂದಿರುವಿರೆಂದು

ನನಗೆ ಚೆನ್ನಾಗಿ ಗೊತ್ತು. ನಾನು ಹೇಳಲಿಲ್ಲವೆ, ನೀವು ಹೆದರಲು ಕಾರಣವಿಲ್ಲ ಎಂದು. ನನಗೇನೂ ಆಗಿಲ್ಲ. ಅಷ್ಟು ತಿಂದರೂ ನನಗೆ ಏನೂ ಆಗುವುದಿಲ್ಲ. ನೋಡಿ ನಾನು ಆರೋಗ್ಯ ವಾಗಿಯೇ ಇರುವೆ. ನೀವು ನಿಶ್ಚಿಂತರಾಗಿ ಹಿಂತಿರುಗಿರಿ." ಅವನು ಆರೋಗ್ಯವಾಗಿರುವುದನ್ನು ಕಂಡು ನಾನು ಚಿಂತನೆಯಿಂದ ಮುಕ್ತನಾಗಿ ನನ್ನ ಕೋಣೆಗೆ ಹಿಂತಿರುಗಿದೆ. ನನ್ನ ಅಭಿಪ್ರಾಯದಲ್ಲಿ, ಜೀರ್ಣವಾಗಲು ಕಷ್ಟವಾಗುವಂತಹ ಮೊಟ್ಟೆ ಮೊದಲಾದವು ಗಳನ್ನು ಎರಡು ಅಥವಾ ಮೂರಕ್ಕಿಂತ ಹೆಚ್ಚು ತಿನ್ನಬಾರದು ಎಂದಾಗಿತ್ತು.

ಆಗ ನಾವೆಲ್ಲಾ ಪಾಥುರಿಯಾ ಘಾಟ್‌ನಲ್ಲಿ ವಾಸಮಾಡುತ್ತಿದ್ದೆವು. ಐದನೆಯ ಅಂತಸ್ತಿನ ಮಹಡಿಯಲ್ಲಿದ್ದ ನಾನು ನೀರಿಗಾಗಿ ನಾಲ್ಕನೆಯ ಅಂತಸ್ತಿಗೆ ಬರಬೇಕಿತ್ತು. ನಾಲ್ಕನೆಯ ಅಂತಸ್ತಿನ ಟ್ಯಾಂಕ್‌ನ ಬಳಿ ಹೋಗಬೇಕಾದರೆ ಒಂದು ಸಣ್ಣ ಕೋಣೆಯನ್ನು ಹಾದುಹೋಗಬೇಕಾಗಿತ್ತು. ಆ ಕೋಣೆಯಲ್ಲಿ ನಮ್ಮ ಈ ಬಾಲಕ ಇದ್ದ. ಒಂದು ದಿನ ರಾತ್ರಿ ಮಲಗುವ ಮುನ್ನ ಹೋದಾಗ ಅವನ ಕೋಣೆಯೊಳಗೆ ದೀಪ ಉರಿಯುತ್ತಿತ್ತು. ಆ ಬಾಲಕ ನಿದ್ರಾವಶನಾಗಿ ಕುಳಿತಲ್ಲೇ ಕೆಳಕ್ಕೆ ಬಾಗುತ್ತಿದ್ದಾನೆ! ಅವನ ಸಹಪಾಠಿ ಆಗಲೇ ನಿದ್ರೆ ಮಾಡಿದ್ದಾನೆ. ನಾನು ಆ ಬಾಲಕನಿಗೆ ಹೇಳಿದೆ, "ನಿನ್ನ ಜೊತೆಯವನು ನಿದ್ರಿಸುತ್ತಿದ್ದಾನೆ. ನೀನೂ ಸಹ ಕುಳಿತೇ ನಿದ್ರಿಸುತ್ತಿರುವೆ. ಆದರೆ ದೀಪವನ್ನೇಕೆ ಆರಿಸಿಲ್ಲ? ದೀಪವಾರಿಸಿ ಮಲಗಬಹುದಲ್ಲಾ?" ಆತ ಉತ್ತರವಿತ್ತ, 'ನಾನು ಈಗಲೇ ದೀಪವಾರಿಸಲಾರೆ ಅಣ್ಣಾ! ಪೂಜ್ಯ ಸ್ವಾಮೀಜಿ ಹೇಳಿದ್ದಾರೆ, ರಾತ್ರಿ ೧೧ ಗಂಟೆ ಹೊಡೆದಾಗ ಎಲ್ಲರೂ ದೀಪವಾರಿಸಿ ಮಲಗಬೇಕು ಎಂದು. ನೋಡಿ, ಈಗ ಹನ್ನೊಂದು ಗಂಟೆಗೆ ಇನ್ನೂ ಇಪ್ಪತ್ತು ನಿಮಿಷವಿದೆ. ಈಗಲೇ ದೀಪವಾರಿಸುವುದು ಹೇಗೆ?" ತನ್ನ ನಿರ್ಮಲವಾದ ಮುಖದಲ್ಲಿ ತಿಳಿನಗುವನ್ನು ಬೀರುತ್ತಿದ್ದ! ಕಣ್ಣಿನಲ್ಲಿ ಸಂತಸದ ಬೆಳಕು! ಪೂಜ್ಯ ಸ್ವಾಮಿಜಿ ಕೆಲದಿನದ ಹಿಂದೆ ಒಂದು ಸುತ್ತೋಲೆ ಕಳಿಸಿದ್ದರು. ಅದರಲ್ಲಿ ರಾತ್ರಿ ಬಹಳ ಹೊತ್ತು ಎದ್ದಿದ್ದರೆ, ಸಹಪಾಠಿಯ ನಿದ್ರಾಭಂಗವಾಗಬಹುದು. ಆದ್ದರಿಂದ ಪ್ರತಿಯೊಬ್ಬರೂ ೧೧ ಗಂಟೆಯ ಮೇಲೆ ದೀಪ ಹಾಕಬಾರದು ಎಂದಿತ್ತು. ಆದರೆ ಈ ಬಾಲಕ ಸುತ್ತೋಲೆಗೆ ಹೊಸ ಅರ್ಥವನ್ನು ಕಲ್ಪಿಸಿದ್ದ! ನಾನು ಆತನಿಗೆ ಸ್ವಾಮಿಜಿಯ ಸುತ್ತೋಲೆಯ ಅರ್ಥವನ್ನು ಸರಿಯಾಗಿ ತಿಳಿಸಲು ಎಷ್ಟೋ ಪ್ರಯತ್ನ ಪಟ್ಟೆ, ಆದರೆ ಫಲಕಾರಿಯಾಗಲಿಲ್ಲ. ಈ ಬಾಲಕ ಈ ರೀತಿಯ ರಸಮಯ ಸನ್ನಿವೇಶಗಳನ್ನು ಸೃಷ್ಟಿಸುತ್ತಿದ್ದ. ಆದರೆ ಆತನಿಗೆ ತಾನು ಏನು ಮಾಡುತ್ತಿದ್ದೇನೆ ಎಂದು ಚೆನ್ನಾಗಿ ಗೊತ್ತಿತ್ತು. ಪ್ರತಿ ಬಾರಿಯೂ ಆತನ ಮುಖ ಮತ್ತು ಕಣ್ಣು ಆನಂದ ಹಾಗೂ ಹೆಮ್ಮೆಯಿಂದ ಮಿನುಗುತ್ತಿತ್ತು.

ಈ ಬಾಲಕ ಪೂಜ್ಯ ಸ್ವಾಮಿ ಲೋಕೇಶ್ವರಾನಂದಜಿಯವರ ಆಶ್ರಯದಲ್ಲಿದ್ದು ಬಿ.ಎಸ್‌ಸಿ. ಪಾಸ್ ಮಾಡಿದ. ಆತ ತನ್ನ ಅನೇಕ ಸದ್ಗುಣಗಳಿಂದ ಹಾಗೂ ಸರಳತೆಯಿಂದ ಸ್ವಾಮಿಜಿ ಯವರ ವಿಶೇಷ ಪ್ರೀತಿಗೂ ಪಾತ್ರನಾಗಿದ್ದ. ಇದೇ ಕಾರಣಕ್ಕಾಗಿ ಎಲ್ಲರೂ ಆತನನ್ನು ಪ್ರೀತಿಸುತ್ತಿದ್ದರು. ನನ್ನೊಂದಿಗೆ ವಿಶೇಷ ಅಂತರಂಗದ ಸಂಬಂಧವೂ ಉಂಟಾಯಿತು, ಏಕೆಂದರೆ ಆತನಿಗೂ ಹಾಡುವುದು, ತಬಲ ನುಡಿಸುವುದು ಇಷ್ಟ, ನನಗೂ ಅದೆಲ್ಲಾ ಇಷ್ಟ. ಆಶ್ರಮದಲ್ಲಿ ಆಗ ನಾವು ಹಾಡುವುದನ್ನು ಕಲಿಯುತ್ತಿದ್ದೆವು. ಹಾಡನ್ನು ಹೇಳಿಕೊಡಲು ಗುರುಗಳು ಪ್ರತಿ ಭಾನುವಾರ ಬೆಳಗ್ಗೆ ಬರುತ್ತಿದ್ದರು. ಹಾಡಿನ ತರಗತಿಯಲ್ಲಿ ನಮ್ಮ ಈ ಬಾಲಕ ತುಂಬ ಚೆನ್ನಾಗಿ ತಬಲ ನುಡಿಸುತ್ತಿದ್ದ. ಕಾಳೀಪೂಜೆ, ಸರಸ್ವತಿಪೂಜೆಯ ಸಮಯದಲ್ಲಿ ಹಲವಾರು ಗಂಟೆಗಳ ಕಾಲ ಆಶ್ರಮದಲ್ಲಿ ಭಜನೆ ನಡೆಯುತ್ತಿತ್ತು. ಅಲ್ಲಿಗೂ ಈ. ಬಾಲಕ ತಪ್ಪದೇ ಬರುತ್ತಿದ್ದ. ಸಂಜೆಯ ಹೊತ್ತು ನಾನು ಹಾಗೂ ಸ್ವಾಮಿ ಉಮಾನಂದರು ಗಂಗಾತೀರದಲ್ಲಿ ನಡೆದಾಡುತ್ತಿದ್ದೆವು; ಆಗಲೂ ಈ ಬಾಲಕ ನಮ್ಮೊಡನೆ ಇರುತ್ತಿದ್ದ. ವಾಪಸ್ಸು ಬರುವಾಗ ನಾವು ಬೇವಿನ ಮರದ ಬಳಿಯಿದ್ದ ಮಹಾಸ್ಮಶಾನಕ್ಕೆ ಹೋಗಿ ಅಲ್ಲಿ ಶವಗಳನ್ನು ಸುಡುವುದನ್ನು ನೋಡುತ್ತಿದ್ದೆವು. ಅದನ್ನು ನೋಡಿದ ಈ ಬಾಲಕ ಒಂದು ದಿನ ಹೇಳಿದ, 'ವೈದ್ಯನಾಥ ಅಣ್ಣಾ, ನಮಗೂ ಸಹ ಒಂದು ದಿನ ಇದೇ ರೀತಿಯಾಗುವು ದಲ್ಲವೇ?" ಇದಕ್ಕೆ ಏನುತ್ತರ ಕೊಡುವುದು?

ಈ ಬಾಲಕ ಬಿ.ಎಸ್‌ಸಿ. ಪಾಸುಮಾಡಿದ ಬಳಿಕ ಸ್ವಾಮಿ ಲೋಕೇಶ್ವರಾನಂದಜಿ ಮಹಾರಾಜರು ತಾವೆಂದೂ ಮಾಡದ ಒಂದು ಕೆಲಸವನ್ನು ಈ ಬಾಲಕನ ಮೇಲಿನ ಪ್ರೀತಿಗಾಗಿ ಮಾಡಿದರು. ಅದೇನೆಂದರೆ, ಅವನ ಅತ್ಯಂತ ದಯನೀಯ ಸ್ಥಿತಿಯ ಬಗ್ಗೆ ಬಂಗಾಳದಲ್ಲಿ ಆಗ ಶಿಕ್ಷಣ ಸಚಿವರಾಗಿದ್ದ ಡಾ. ಡಿ.ಎಚ್. ಸೇನರಿಗೆ ತಿಳಿಸಿ, ಅವನಿಗೆ ಒಳ್ಳೆಯ ಕೆಲಸ ಕೊಡಿಸಲು ಶಿಫಾರಸು ಮಾಡಿದರು. ಡಾ. ಸೇನರು ಕೂಡಲೇ ಸಮ್ಮತಿಸಿ ಈ ಹುಡುಗನಿಗೆ ಯಾವ ಕೆಲಸದಲ್ಲಿ ಅಭಿರುಚಿಯಿದೆ ಎಂಬುದನ್ನು ತಿಳಿಸಬೇಕೆಂದರು. ಇದು ಆ ಬಾಲಕನ ಜೀವನದ ಒಂದು ಅತ್ಯಂತ ಶುಭ ಘಳಿಗೆ! ಒಂದು ಒಳ್ಳೆಯ ಕೆಲಸ ಪಡೆದು ಇಡೀ ಜೀವಮಾನಪರ್ಯಂತ ಕೊಲ್ಕತಾದಲ್ಲಿ ಓರ್ವ ನಾಗರಿಕ ವ್ಯಕ್ತಿಯಾಗಿ ಬಾಳ್ವೆ ನಡೆಸಬಹುದಾಗಿತ್ತು! ಆದರೆ ಆತ ಮಾಮೂಲು ದಾರಿಯಲ್ಲಿ ಹೋಗದೆ, ಸಮಾಜಕ್ಕೆ ಒಂದು ಉಜ್ವಲ ಆದರ್ಶವನ್ನೇ ಎತ್ತಿಹಿಡಿದ.

ಪೂಜ್ಯ ಲೋಕೇಶ್ವರಾನಂದಜಿಯವರ ಸಮಕ್ಷಮದಲ್ಲಿಯೇ ಡಾ. ಸೇನರು ನೀಡಿದ ಈ ಸುವರ್ಣಾವಕಾಶವನ್ನು ಸವಿನಯ ವಾಗಿ ನಿರಾಕರಿಸಿ ಅವನು ಹೀಗೆ ಹೇಳಿದ: 'ಸರ್, ನಾನು ಕೆಲಸ ಮಾಡುವುದಿಲ್ಲ. ನಾನು ನನ್ನ ಗ್ರಾಮಕ್ಕೆ ಹಿಂತಿರುಗಿ ಅದರ ಉನ್ನತಿಗಾಗಿ ಶ್ರಮಿಸುವೆ. ನನ್ನ ಗ್ರಾಮದ ಜನ ಅತ್ಯಂತ ದರಿದ್ರರು, ಎರಡು ವೇಳೆ ಊಟಕ್ಕೂ ಇಲ್ಲದವರು. ಉಡಲು ಬಟ್ಟೆಯಿಲ್ಲ, ಹತ್ತು ಹನ್ನೆರಡು ವಯಸ್ಸಿನ ಮಕ್ಕಳು ಸಹ ಬರಿಮೈಯಲ್ಲಿರುತ್ತಾರೆ. ನನ್ನ ಗ್ರಾಮದಲ್ಲಿ ಹಾಗೂ ಅಕ್ಕಪಕ್ಕದ ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ಹತ್ತಿರದಲ್ಲಿ